

# ಏಡಿಕಾಯಿ ಘಮಲು ಹಬ್ಬಿಸಿದ ಕಾಫಿಸೀಮೆಯ ಸ್ನೇಹಾ

ನಿರೂಪಕಿ ಸ್ನೇಹಾ ನೀಲಪ್ಪ ಗೌಡ ಮಲೆನಾಡ ಕತೆಯನ್ನು ಕಟ್ಟುವುದರಲ್ಲಿ ಜನಪ್ರಿಯ. ಸುಶೀಲಮ್ಮ ಖ್ಯಾತಿಯ ಸ್ನೇಹಾ ಕಾಫಿ ನಾಡಿನ ಘಮಲನ್ನು 'ರೀಲ್ಸ್' ಮೂಲಕ ಮನ ಮನಗಳಿಗೆ ಮುಟ್ಟಿಸುತ್ತಿದ್ದಾರೆ. ತಮ್ಮ ಆ ಕೆಲಸದ ಹಿಂದಿನ ಕತೆಯನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.

■ ನಿರೂಪಣೆ: **ರಾಘವೇಂದ್ರ ತೊಗರ್ಸಿ**

ಸುಶೀಲಮ್ಮ ಇಷ್ಟು ಜನಜನಿತ ಆಗುತ್ತಾಳೆ ಎಂದು ಗೊತ್ತಿರಲಿಲ್ಲ. ಮಲೆನಾಡ ಮನೆ ಮನೆ ಕತೆ ಹೇಳುವ ಪುಟ್ಟ ಪ್ರಯತ್ನವನ್ನು ತಂಗಿ ಜೊತೆ ಸೇರಿ ಮಾಡಿದೆ. ಅದು ತಲುಪಿದ ಪರಿ ಮತ್ತೆ ಮತ್ತೆ ಆ ಕೆಲಸವನ್ನು ಮಾಡಿಸುವಂತೆ ಹುರಿದುಂಬಿಸಿತು. ಕೊನೆಗೆ ಅದು ಯಾವ ಮಟ್ಟಿಗೆ ತೆಗೆದುಕೊಂಡು ಹೋಯಿತು ಎಂದರೆ, ಮೂಲ ಹೆಸರೇ ತೆರೆಗೆ ಸರಿದು ಸುಶೀಲಮ್ಮನೇ ಮೆರೆಯುವಂತೆ ಆಯಿತು. ಹುಡುಗಾಟಕ್ಕೆ ರೀಲ್ಸ್ ಮಾಡಿದ್ದೆ. ಅದಕ್ಕೆ ವಿಶೇಷ ಸಂದರ್ಭ, ತಂಗಿ ನಾನು ಒಂದೇ ರೀತಿಯ ಬಟ್ಟೆ ಹೊಲಿಸಿದ್ದೇ ಆಗಿತ್ತು.

ಹೊಸ ದಿರಿಸಿಗೊಂದು ದೃಶ್ಯ ರೂಪ ಕೊಡಬೇಕೆಂದು ವಿಡಿಯೊ ಮಾಡಿದೆವು. ಅದು ದೊಡ್ಡ ಮಟ್ಟದಲ್ಲಿ ಜನರನ್ನು ತಲುಪಿತು. ಅವತ್ತು ಸುಮ್ಮನೆ 'ಸುಸೀಲಕ್ಕ' ಹೆಸರು ಕೊಟ್ಟುಕೊಂಡಿದ್ದೆವು ಅದೇ ಮುಂದುವರಿಯಿತು. ಮಲೆನಾಡಿನ ಮಹಿಳೆಯರ ಮಾತುಕತೆಯೇ ನಮ್ಮ ಕಥಾ ಹಂದರದ ಹೂರಣ. ನಮ್ಮ ಭಾಗದಲ್ಲಿ ಶಶಿಕಲಾ ಸಸಿಕಲಾ, ಶಾಸಕ ಸಾಸಕ ಎಂದು ಅಪಭ್ರಂಶಗೊಳಿಸಿ ಮಾತನಾಡುವುದು ಸಾಮಾನ್ಯ. ಅದನ್ನೇ ಸುಶೀಲಾ ಪಾತ್ರಕ್ಕೂ ಅಳವಡಿಸಿದೆವು. ಸುಶೀಲಮ್ಮ ಜನಪ್ರಿಯ ಆದಳು. ನನ್ನ ಹೆಸರೇ ಗೊತ್ತಿಲ್ಲದಿದ್ದರೂ ಜನ ಅದೇ ಹೆಸರಿನಿಂದ ಗುರುತಿಸುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಬಾಳೆಹೊನ್ನೂರು ಬಳಿಯ ಕರಗೆಣೆ ಎಂಬ ಹಳ್ಳಿ ನಮ್ಮೂರು. ಮೂವರು ಅಕ್ಕ ತಂಗಿಯರು. ಶೃಂಗೇರಿ ಸಮೀಪದ ಬೆಣ್ಣೆಗುಡ್ಡೆ ಅಮ್ಮನ ತವರು. ಅಲ್ಲೇ ಇದ್ದು ಶೃಂಗೇರಿಯಲ್ಲಿ ಸ್ವಲ್ಪ ದಿನ ಓದಿದೆ. ಪ್ರೌಢಶಾಲೆಗೆ ಬಾಳೆಹೊನ್ನೂರಿಗೆ ಬಂದೆ. ಆಗ ಶಾಲೆ–ಅಂತರ ಶಾಲೆಯ ಸ್ಪರ್ಧೆಗಳಲ್ಲಿ ಭಾಷಣ, ಚರ್ಚಾಸ್ಪರ್ಧೆ, ಆಶುಭಾಷಣದಲ್ಲಿ ಭಾಗವಹಿಸಿ ಗೆಲ್ಲುತ್ತಿದ್ದೆ. ಬರುತ್ತಿದ್ದ ಬಹುಮಾನಗಳನ್ನು ಇಡಲಾದರೂ ಒಳ್ಳೆಯ ಮನೆ ಕಟ್ಟಿ ಶೋಕೇಸ್ ಮಾಡಿಸಬೇಕು ಎಂದು ಅಮ್ಮ ಹೇಳುತ್ತಿದ್ದರು. ಪಿಯುಸಿ ವಿಜ್ಞಾನ ವಿಭಾಗಕ್ಕೆ ಶೃಂಗೇರಿಯ ಸರ್ಕಾರಿ ಕಾಲೇಜಿಗೆ ಸೇರಿದೆ. ಭಾಷಣಗಳ ಸ್ಪರ್ಧೆ ಜೊತೆ ಕಾಲೇಜು ಕಾರ್ಯಕ್ರಮಗಳಿಗೆ ನಾನೇ ನಿರೂಪಕಿ ಆಗುತ್ತಿದ್ದೆ. ಬಿಎಸ್‌ಸಿ ಓದಲು ಚಿಕ್ಕಮಗಳೂರಿಗೆ ಬಂದೆ. ಅಲ್ಲಿ ವಿಪುಲ ಅವಕಾಶಗಳು ಸಿಕ್ಕವು. ಹಳ್ಳಿಯಲ್ಲಿ ಬೆಳೆದುಬಂದವಳಿಗೆ ಅದೇ ದೊಡ್ಡ ನಗರ ಅನ್ನಿಸಿತ್ತು. ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚು ನಡೆಯುತ್ತಿದ್ದವು. ಸುಮಾರು 3000 ವಿದ್ಯಾರ್ಥಿಗಳಿದ್ದ ದೊಡ್ಡ ಕಾಲೇಜು. ಯಾವುದೇ ವಿಭಾಗದಲ್ಲಿ ಯಾವುದೇ ಕಾರ್ಯಕ್ರಮ ಇದ್ದರೂ ನಾನೇ ಕಾಯಂ ನಿರೂಪಕಿ. ಭಾವುಕಳಾಗಿ ತಲ್ಲೀನತೆಯಿಂದ ಮಾತನಾಡುತ್ತಿದ್ದೆ.

ಕ್ಯಾಮೆರಾ ಎದುರಿಸಿದ ನಂತರ ಹೇಗೆ ಮಾತನಾಡಬೇಕು ಎನ್ನುವುದು ಗೊತ್ತಾಯಿತು. 2017ರಲ್ಲಿ ಅವಕಾಶ ಹುಡುಕಿ ಬೆಂಗಳೂರಿಗೆ ಬಂದೆ. ನಿರೂಪಕಿಯ ಕನಸಿನಲ್ಲಿ ಹಲವು ಟೀವಿ ವಾಹಿನಿಗಳಲ್ಲಿ ಕೆಲಸ ಕೇಳಿದೆ. ಅಲೆದಲೆದು ಕೊನೆಗೂ ನ್ಯೂಸ್ ಚಾನಲಿನಲ್ಲಿ ಕೆಲಸ ಆರಂಭಿಸಿದೆ. ನನ್ನ ಕನಸೇ ಬೇರೆ ಎಂದು ಆ ಕೆಲಸವನ್ನು ಬಿಟ್ಟು ಬಂದೆ. ನಂತರ ಖಾಸಗಿ ಕಾರ್ಯಕ್ರಮ, ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೇನೆ. 'ನಾಕು ಮುಖ' ಸಿನಿಮಾ ಪ್ರಚಾರ ಕಾರ್ಯದ ವೇದಿಕೆ ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿರೂಪಿಸುವ ಭಾಗ್ಯವನ್ನು ಕಲ್ಪಿಸಿತು. ಕನ್ನಡ ಸ್ಪಷ್ಟವಾಗಿ ಮಾತನಾಡುವುದು ಪಾಸಿಟಿವ್ ಆಗಿದೆ. ಈ ಎಲ್ಲ ಪ್ರಯೋಗಗಳು ರೀಲ್ಸ್ ನಿರ್ಮಿಸಲು ಪ್ರೇರಣೆಯಾಗಿವೆ.

## ಕಥೆನೂ ಇಲ್ಲ ಬರಹವೂ ಇಲ್ಲ!

ಸ್ಕ್ರಿಪ್ಟ್ ಕಥೆ, ಸಂಭಾಷಣೆ ಎಂದೂ ಸಿದ್ಧ